# ಬುದ್ಧ ಮತ್ತು ಭಿಕಾರಿ

ಇದು ಬೌದ್ಧ ದೇಶಗಳಲ್ಲಿ ಪ್ರಚಲಿತವಿರುವ ಕಥೆ. ಒಂದು ಊರಿನಲ್ಲಿ ಭಿಕಾರಿಯೊಬ್ಬ ಪಾಳು ಗೋಡೆಯೊಂದರ ಬಳಿ ವಾಸಿಸುತಿದ್ದ. ಹೊಟ್ಟೆಗೆ ಆಹಾರವನ್ನು ಬೇಡಿ ಪಡೆಯುತ್ತಿದ್ದ. ಆದರೆ ಬೇಡಿ ತಂದ ಉಂಬಳವು ಕಣ್ಣು ಮಿಟುಕಿಸುವುದರೊಳಗೆ ಮಾಯವಾಗಿಬಿಡುತ್ತಿತ್ತು. ಇದು ಇಲಿ ಮಾಡುತ್ತಿರುವ ಕೆಲಸ ಎಂದು ತಿಳಿಯಲು ಅವನಿಗೆ ಬಹಳ ದಿನ ಬೇಕಾಗಲಿಲ್ಲ. ಒಂದು ದಿನ ಇಲಿಯನ್ನು 'ನನ್ನ ಆಹಾರವನ್ನೇ ಯಾಕೆ ಕದಿಯುತ್ತಿರುವೆ. ಪಟ್ಟಣದಲ್ಲಿ ಎಷ್ಟೊಂದು ಜನ ಶ್ರೀಮಂತರಿದ್ದಾರೆ, ಅವರ ಮನೆಗಳಿಗೆ ಹೋದರೆ ನಿನಗೆ ಸಮೃದ್ಧವಾದ ಭೋಜನ ಸಿಗುವುದಿಲ್ಲವೆ?' ಎಂದು ಕೇಳಿದ. ಇಲಿ ಹೇಳಿತು; ಇದು ನಿನ್ನ ಹಣೆಬರಹ! ನಿನ್ನದು ಎಂಬ ಏನನ್ನೂ ನೀನು ಗಳಿಸಲಾರೆ. ಯಾಕೆ ಹೀಗೆ? ಭಿಕಾರಿ ಪ್ರಶ್ನಿಸಿದ. 'ಅದು ನನಗೆ ತಿಳಿಯದು, ಬೇಕಾದರೆ ಬುದ್ಧನನ್ನು ಕೇಳು' ಎಂದಿತು ಇಲಿ.

ಮರುದಿನವೇ ಭಿಕಾರಿ, ಬುದ್ಧನನ್ನು ಕಾಣಲು ಹೊರಟ. ಕಾಡು ಮೇಡುಗಳನ್ನು ದಾಟಿ ಅಲೆಯುತ್ತಾ ಇರುವಾಗ ಕತ್ತಲಾಯಿತು. ರಾತ್ರಿ ಎಲ್ಲಾದರೂ ತಂಗಬೇಕೆಂದು ಯೋಚಿಸಿ ಹತ್ತಿರದಲ್ಲಿ ಕಂಡ ಒಬ್ಬ ಶ್ರೀಮಂತನ ಮನೆಯ ಬಾಗಿಲು ತಟ್ಟಿದ. ಮನೆಯೊಡೆಯ ಬಾಗಿಲು ತೆರೆದು, ಬಂದ ಕಾರಣವನ್ನು ಕೇಳಿದ. ಭಿಕಾರಿಯು ತಾನು ಬುದ್ಧನನ್ನು ಕಂಡು ಅವನಿಂದ ಒಂದು ಪ್ರಶ್ನೆಗೆ ಉತ್ತರವನ್ನು ಪಡೆಯಬೇಕಾಗಿದೆಯೆಂದು ಹೇಳಿದ. ಒಡೆಯನಿಗೆ ಆಶ್ಚರ್ಯವಾಗಿ, ಹಾಗಾದರೆ ನನ್ನದೂ ಒಂದು ಪ್ರಶ್ನೆ ಇದೆ ಎಂದ. ಆ ಶ್ರೀಮಂತ ದಂಪತಿಗೆ ಸುಂದರಿಯಾದ ಆದರೆ ಮೂಕಿಯಾದ, ಹದಿನಾರರ ಹರಯದ ಒಬ್ಬಳೇ ಮಗಳಿದ್ದಳು. ಅವಳಿಗೆ ಮಾತು ಬರಲು ಏನು ಮಾಡಬೇಕೆಂದು ಕೇಳು ಎಂದ. 'ಆಗಲಿ' ಎಂದ ಭಿಕಾರಿ ಮುಂಜಾವದಲ್ಲಿ ಎದ್ದು ಆಶ್ರಯ ಕೊಟ್ಟಿದ್ದಕ್ಕಾಗಿ ವಂದಿಸಿ, ಬುದ್ಧನನ್ನು ಅರಸಿ ಹೊರಟ.

ಹಾದಿಯು ದುರ್ಗಮವಾಗಿತ್ತು. ಪರ್ವತಶ್ರೇಣಿ, ಶಿಖರಗಳು ಕಂಡವು. ಒಂದು ಶಿಖರವನ್ನು ಹತ್ತಿ ಇಳಿಯುವುದರಲ್ಲಿ ಭಿಕಾರಿಯು ದಣಿದಿದ್ದ. ಅಷ್ಟರಲ್ಲಿ, ಒಬ್ಬ ವೃದ್ಧನಾದ ಸಂತ ಕಾಣಿಸಿಕೊಂಡ. ಕೈಯಲ್ಲಿ ಒಂದು ದಂಡವಿತ್ತು. ಆತ ಹೇಳಿದ; ಯುವಕನೆ, ಒಬ್ಬನೇ ಎಲ್ಲಿಗೆ ಹೊರಟಿರುವೆ, ಪರ್ವತಗಳನ್ನು ದಾಟುವ ಸಾಹಸ ಮಾಡಲು ಕಾರಣವೇನು? ಈ ದಂಡದ ಸಹಾಯದಿಂದ ನಾನು ನಿನ್ನನ್ನು ಪರ್ವತಗಳಾಚೆಗೆ ದಾಟಿಸಬಲ್ಲೆ, ಎಂದ. 'ನಾನು ಬುದ್ಧನನ್ನು ಕಾಣಲು ಹೊರಟಿರುವೆ, ನನ್ನ ಹಣೆಬರಹ ಏನೆಂದು ಒಂದು ಪ್ರಶ್ನೆ ಕೇಳಬೇಕಾಗಿದೆ' ಇವನೆಂದ. ಹಾಗಾದರೆ ನನ್ನದೂ ಒಂದು ಪ್ರಶ್ನೆ ಇದೆ. ಒಂದು ಸಾವಿರ ವರ್ಷಗಳಿಂದಲೂ ನಾನು ನಂಬಿರುವ ಉಪದೇಶಗಳಿಗೆ ಬದ್ಧನಾಗಿ ಜೀವಿಸುತ್ತಿದ್ದೇನೆ. ಇನ್ನೂ ಸ್ವರ್ಗಕ್ಕೆ ಹೋಗಲು ಸಾಧ್ಯವಾಗಿಲ್ಲ. ನಾನು ಸ್ವರ್ಗಕ್ಕೆ ಹೋಗಬೇಕಾದರೆ ಏನು ಮಾಡಬೇಕೆಂದು ಕೇಳಿಕೊಂಡು ಬಾ ಎಂದ. ಭಿಕಾರಿ 'ಆಗಲಿ' ಎಂದು ಮುಂದಕ್ಕೆ ಹೊರಟ.

ದಾರಿ ಸಾಗುತ್ತಿರುವಾಗಲೇ ದೊಡ್ಡದಾದ ನದಿಯೊಂದು ಎದುರಾಯಿತು. ದಾಟಲು ಸಾಧ್ಯವೇ ಇಲ್ಲವೆನ್ನುತ್ತಾ ನಿರಾಶನಾಗಿ ಕುಳಿತಿರುವಾಗ ದೊಡ್ಡ ಗಾತ್ರದ ಆಮೆಯೊಂದು ಬಳಿ ಬಂದು ಕೇಳಿತು. ಯುವಕನೆ, ಒಬ್ಬನೇ ಎಲ್ಲಿಗೆ ಹೊರಟಿರುವೆ, ಯಾಕೆ ಚಿಂತಿಸುತ್ತಿರುವೆ? 'ನಾನು ಬುದ್ಧನನ್ನು ಕಾಣಲು ಹೊರಟಿರುವೆ, ನನ್ನ ಹಣೆಬರಹ ಏನೆಂದು ಒಂದು ಪ್ರಶ್ನೆ ಕೇಳಬೇಕಾಗಿದೆ' ಎಂದ ಭಿಕಾರಿ ಯುವಕ. ಹಾಗಾದರೆ ನನ್ನ ಬೆನ್ನ ಮೇಲೆ ಕುಳಿತುಕೊ. ನಿನ್ನನ್ನು ಆಚೆ ದಡದ ಬದಿಗೆ ತಲುಪಿಸುವೆ. ಆದರೆ, ನನ್ನದೂ ಒಂದು ಪ್ರಶ್ನೆಯಿದೆ! ಎಂದಿತು ಆಮೆ. 'ಏನದು, ನಿಸ್ಸಂಕೋಚದಿಂದ ಹೇಳು' ಎಂದ ಯುವಕ. ಕಳೆದ ಐನೂರು ವರ್ಷಗಳಿಂದಲೂ ಈ ನದಿಯಲ್ಲಿ ವಾಸಮಾಡುತ್ತಿದ್ದೇನೆ. ನಾನು ನಂಬಿರುವ ಉಪದೇಶಗಳಿಗೆ ಬದ್ಧನಾಗಿ ಜೀವಿಸುತ್ತಿದ್ದೇನೆ. ನನಗೆ ಡ್ರ್ಯಾಗನ್ ಆಗಬೇಕೆಂಬ ಆಸೆಯಿದೆ. ನಾನು ಡ್ರ್ಯಾಗನ್ ಆಗಲು ಏನು ಮಾಡಬೇಕು ಎಂದು ಕೇಳಿಕೊಂಡು ಬಾ ಎಂದಿತು.

ಅಂತಿಮವಾಗಿ ಭಿಕಾರಿಯು ಬುದ್ಧನನ್ನು ಸಂಧಿಸಿದ. ಇವನಂತೆಯೆ ಪ್ರಶ್ನೆ ಕೇಳಲು ಬಂದ ಹಲವಾರು ಜನರಿದ್ದರು. ಬುದ್ಧ ಎಲ್ಲರಿಗೂ ಮೂರು ಪ್ರಶ್ನೆಗಳನ್ನು ಮಾತ್ರ ಕೇಳಲು ನಿರ್ಬಂಧ ಹಾಕಿದ! ಯುವಕನಿಗೆ ಆಘಾತವಾಯಿತು. ಯಾಕೆಂದರೆ, ತನ್ನದೂ ಸೇರಿದಂತೆ ಅವನಲ್ಲಿ ನಾಲ್ಕು ಪ್ರಶ್ನೆಗಳಿದ್ದವು. ಸುತ್ತಲೂ ನೋಡಿದ, ಹಲವರು ಕೇಳುತ್ತಿದ್ದ ಪ್ರಶ್ನೆಗಳಿಗಿಂತ ತನ್ನದೇನೂ ದೊಡ್ಡದಲ್ಲ ಎನ್ನಿಸಿತು. ನಾನು ಹೇಗಿದ್ದರೂ ಭಿಕಾರಿ, ಊರಿಗೆ ಮರಳಿ ಮತ್ತೆ ಭಿಕ್ಷೆ ಬೇಡಿದರಾಯಿತು. ನನ್ನ ಹಾದಿಯಲ್ಲಿ ಸಹಾಯಕ್ಕೆ ಬಂದವರ ಮೂರು ಪ್ರಶ್ನೆಗಳನ್ನು ಮಾತ್ರ ಕೇಳುತ್ತೇನೆ ಎಂದು ನಿರ್ಧರಿಸಿದ.

ಬುದ್ಧ ನಿರ್ಗತಿಕ ಯುವಕನ ಮೂರು ಪ್ರಶ್ನೆಗಳಿಗೆ ಶಾಂತ ಚಿತ್ತದಿಂದ ಹೀಗೆ ಉತ್ತರಿಸಿದ. ಆಮೆಯು ತನ್ನ ಕವಚದಿಂದ ಹೊರಗೆ ಬರುವವರೆಗೂ ಅದರ ಆಸೆ ನೆರವೇರುವುದಿಲ್ಲ. ವೃದ್ಧ ಸಂತನು ತನ್ನ ದಂಡವನ್ನು ತೊರೆಯುವವರೆಗೂ ಸ್ವರ್ಗಕ್ಕೆ ಹೋಗಲಾರ. ಆ ಹದಿನಾರರ ಯುವತಿಗೆ ಆತ್ಮಸಂಗಾತಿಯು ದೊರಕಿದ ಕೂಡಲೇ ಮಾತನಾಡಲು ಕಲಿಯುತ್ತಾಳೆ! ಯುವಕನಿಗೆ ಮಹದಾನಂದವಾಯಿತು. ಬಂದ ದಾರಿಯಲ್ಲಿ ಹಿಂದಿರುಗಿದ.

ಮೊದಲು ಆಮೆಯನ್ನು ಭೇಟಿಮಾಡಿದ. ನೀನು ನಿನ್ನ ಸುಕ್ಷೇಮವಾದ ಕವಚದಿಂದ ಹೊರಗೆ ಬಾ, ನಿನ್ನ ಆಸೆಯು ನೆರವೇರುತ್ತದೆ ಎಂದ. ಆಮೆಯು ಸಾವಕಾಶ ತನ್ನ ಶರೀರವನ್ನು ಸಡಿಲಿಸಿಕೊಂಡು ಹೊರಗೆ ಬರುತ್ತಲೇ ಡ್ರ್ಯಾಗನ್ ರೂಪ ತಾಳಿತು. ಕವಚದಲ್ಲಿ ಶೇಖರವಾಗಿದ್ದ ಮುತ್ತುಗಳು ಹೊರಸುರಿಯತೊಡಗಿದವು. ಅವುಗಳನ್ನು ನೀನೆ ಇಟ್ಟುಕೊ, ಈಗ ನನಗದರ ಅಗತ್ಯವಿಲ್ಲ ಎಂದು ಹೇಳುತ್ತಾ ಡ್ರ್ಯಾಗನ್ ಹಾರಿಹೋಯಿತು. ಯುವಕ ಸಂತನ ಬಳಿಗೆ ಬಂದ. ಹೇ ವೃದ್ಧನೆ, ನೀನು ನಿನ್ನ ದಂಡವನ್ನು ತೊರೆಯಬೇಕು, ಅದಕ್ಕೆ ಅಂಟಿಕೊಂಡೇ ಇದ್ದರೆ ಸ್ವರ್ಗಕ್ಕೆ ಹೋಗಲು ಸಾಧ್ಯವಿಲ್ಲ. ಸಂತನು ದಂಡವನ್ನು ಯುವಕನ ಕೈಗಿತ್ತು ಇದನ್ನು ನೀನೇ ಇಟ್ಟುಕೊ, ನಾನು ಈಗ ಸ್ವರ್ಗಕ್ಕೆ ಹೊರಡುತ್ತೇನೆ ಎಂದು ಹೊರಟೇಬಿಟ್ಟ. ಈಗ ಐಶ್ವರ್ಯ ಮತ್ತು ಅಧಿಕಾರ ಎರಡೂ ಯುವಕನ ಪಾಲಾದವು. ಕೊನೆಯದಾಗಿ ತನಗೆ ಆಶ್ರಯ ನೀಡಿದ್ದ ಶ್ರೀಮಂತನ ಮನೆಗೆ ಬಂದ. ಬುದ್ಧ ಹೇಳಿದ; ನಿಮ್ಮ ಮಗಳು ಒಬ್ಬ ಆತ್ಮಸಂಗಾತಿ ಸಿಕ್ಕ ಕೂಡಲೇ ಮಾತನಾಡುತ್ತಾಳೆ ಎಂದ. ಅಷ್ಟರಲ್ಲಿ ಯುವತಿ ಮಹಡಿಯಿಂದ ಇಳಿದು ಬರುತ್ತಿದ್ದಳು, ನೀನು ಕಳೆದ ವಾರ ನಮ್ಮ ಮನೆಯಲ್ಲಿ ಉಳಿದಿದ್ದೆ ಅಲ್ಲವೆ? ಎಂದಳು. ತಂದೆ ತಾಯಿ ಆಶ್ಚರ್ಯಚಕಿತರಾದರು. ಅವರಿಬ್ಬರೂ ತಮ್ಮ ಆತ್ಮಸಂಗಾತಿಗಳನ್ನು ಕಂಡುಕೊಂಡಿದ್ದರು.

ಈ ಕಥೆಯಲ್ಲಿ ಎಷ್ಟೊಂದು ಪಾಠಗಳಿವೆ. ನನಗೆ ಪದಗಳ ಮಿತಿಯಿದೆ, ನಿಮ್ಮ ಕಲ್ಪನೆಗೆ ಮಿತಿಯಿಲ್ಲ.

■ ಮೂಚಿ

## ಮಾತೇ ಮುತ್ತು

★ ಮೂರ್ಖನ ಹಣ ಮಾತ್ರ ಅತ್ಯಧಿಕ ಪ್ರಚಾರ ಪಡೆಯುತ್ತದೆ.

-ಅಲ್ ಬೆರ್ಸ್ಟೀನ್

★ ಶಕ್ತಿ ಬರುವುದು ದೈಹಿಕ ಸಾಮರ್ಥ್ಯದಿಂದ ಅಲ್ಲ; ಮಾನಸಿಕ ದೃಢತೆಯಿಂದ.

-ಮಹಾತ್ಮ ಗಾಂಧಿ

★ ಇಂದ್ರಿಯಗಳನ್ನು ಮತ್ತು ಮನಸ್ಸನ್ನು ನಿಗ್ರಹಿಸಿದರೆ ನಿಮ್ಮ ಹೃದಯದಲ್ಲಿರುವ ದೇವರು ಕಾಣಿಸುತ್ತಾನೆ.

-ಆದಿ ಶಂಕರ

★ ಇತಿಹಾಸವನ್ನು ಯಾರು ಬೇಕಾದರೂ ಸೃಷ್ಟಿಸಬಹುದು. ಆದರೆ ಶ್ರೇಷ್ಠ ವ್ಯಕ್ತಿಗಳು ಮಾತ್ರ ಅದನ್ನು ಬರೆಯುತ್ತಾರೆ.

-ಆಸ್ಕರ್ ವೈಲ್ಡ್

★ ಯಾವುದೇ ಕೆಲಸವನ್ನು ಮಾಡುವುದಕ್ಕಿಂತ ಮುಂಚೆಯೇ ಕಲಿಯಬೇಕೆಂದರೆ, ಅದನ್ನು ಮಾಡುತ್ತಲೇ ಕಲಿಯಬೇಕು.

-ಅರಿಸ್ಟಾಟಲ್

★ ಯಾರಿಗೆ ಯಾರೂ ಇಲ್ಲ ಎನ್ನುವುದೇ ಈ ಜಗತ್ತಿನ ಅತಿದೊಡ್ಡ ರೋಗ.

-ಮದರ್ ತೆರೆಸಾ

★ ನಮ್ಮ ಕನಸುಗಳೇ ನಾವು ನಿಜವಾಗಿ ಯಾರು ಎನ್ನುವುದನ್ನು ತೋರಿಸಿಕೊಡುತ್ತವೆ.

-ಬಾರ್ಬರಾ ಶೆರ್

★ ತಲೆಕೂದಲಿಗೆ ಬಣ್ಣ ಹಚ್ಚುವುದರಿಂದ ಯೌವನವನ್ನು ತಡೆದಿಟ್ಟುಕೊಳ್ಳಲು ಆಗುವುದಿಲ್ಲ.

-ಖಲೀಫಾ ಅಬೂಬಕರ್